ದುಬೈನಲ್ಲಿ ಜಾನಪದ ಪರಿಷತ್ ಘಟಕ ಶುರು

ಬೆಂಗಳೂರು: ಇದೇ ಮೊದಲ ಬಾರಿಗೆ ಯುನೈಟೆಡ್ ಅರಬ್ ಎಮಿರಿಟಸ್‌ನ ಪ್ರಮುಖ ಕೇಂದ್ರವಾದ ದುಬೈನಲ್ಲಿ ಕರ್ನಾಟಕ ಜಾನಪದ ಪರಿಷತ್‌ನ ಘಟಕವನ್ನು ಆರಂಭಿಸಲಾಗುತ್ತಿದೆ ಎಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಪ್ರೊ.ಹಿ.ಚಿ.ಬೋರಲಿಂಗಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಕರ್ನಾಟಕ ಜಾನಪದ ಪರಿಷತ್‌ನ ಘಟಕಗಳನ್ನು ತೆರೆದು ವಿದೇಶಗಳಲ್ಲಿರುವ ಕನ್ನಡಿಗರ ಜೊತೆ ಜಾನಪದದ ಸಂಬಂಧವನ್ನು ಗಟ್ಟಿಗೊಳಿಸಬೇಕೆಂಬ ಉದ್ದೇಶದಿಂದ ದುಬೈನಲ್ಲಿ ಪರಿಷತ್ ಘಟಕವನ್ನು ಆರಂಭಿಸಲಾಗುತ್ತಿದೆ. ಸೆ.6 ಮತ್ತು 7ರಂದು ದುಬೈನ ರಾಮಿಡ್ರೀಮ್ಸ್ ಪಂಚತಾರಾ ಹೋಟೆಲ್‌ನ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಜಾನಪದ ಉತ್ಸವವನ್ನು ಆಯೋಜಿಸಲಾಗಿದೆ ಎಂದು ಹೇಳಿದರು. ಈ ಉತ್ಸವಕ್ಕೆ ಸಚಿವರಾದ ಶಿವರಾಜ್ ತಂಗಡಗಿ, ಎಚ್.ಸಿ.ಮಹದೇವಪ್ಪ, ಮಾಜಿ ಸಚಿವ ಎಚ್.ಆಂಜನೇಯ, ಲೇಖಕ ಪ್ರೊ.ಕೆ.ಇ.ರಾಧಾಕೃಷ್ಣ ಅವರನ್ನು ಆಹ್ವಾನಿಸಲಾಗಿದೆ.

ಸಫಾಯಿ ಕರ್ಮಚಾರಿಗಳೇ ಸ್ವಚ್ಛತಾ ಡಾಕ್ಟರ್ಸ್

ಪಾಲಿಕೆ ಘನತ್ಯಾಜ್ಯ ನಿರ್ವಹಣೆಯ ಟಿಪ್ಪರ್ ಚಾಲಕರ ಸಮಾವೇಶದಲ್ಲಿ ವಿಕಾಸ್

ಸಂ.ಕ.ಸಮಾಚಾರ, ಬೆಂಗಳೂರು

ನಗರ ಸ್ವಚ್ಛತೆ ಕಾಪಾಡುವುದು ಬಿಬಿಎಂಪಿಯ ಪ್ರಮುಖ ಜವಾಬ್ದಾರಿ ಎಂದು ಪಾಲಿಕೆಯ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಕರ್ನಾಟಕ ರಾಜ್ಯ ಪೌರಕಾರ್ಮಿಕ ಮತ್ತು ಸಫಾಯಿ ಕರ್ಮಚಾರಿಗಳ ವರ್ಕರ್ಸ್ ಯುನಿಯನ್ ವತಿಯಿಂದ ಟೌನ್‌ಹಾಲ್‌ನಲ್ಲಿ ನಡೆದ 'ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆಯ ಟಿಪ್ಪರ್ ಮತ್ತು ಕಾಂಪ್ಯಾಕ್ಟರ್ ಚಾಲಕ, ಸಹಾಯಕ ಮತ್ತು ಲೋಡರ್ಸ್‌ಗಳ ಪ್ರಥಮ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಿಬಿಎಂಪಿಯ ಪ್ರಮುಖ ಜವಾಬ್ದಾರಿ ನಗರ ಸ್ವಚ್ಛತೆ, ಆ ಕೆಲಸವನ್ನು ತಾವು ಶ್ರದ್ಧೆಯಿಂದ ನಿತ್ಯದ ಕಾರ್ಯವಾಗಿ ನಿರ್ವಹಿಸಿ ನಮ್ಮೆಲ್ಲರ ಹಾಗೂ ನಗರದ ನಾಗರಿಕರ ಆರೋಗ್ಯ ಸುರಕ್ಷತೆಯನ್ನು ಕಾಪಾಡುತ್ತಿದ್ದೀರಿ. ಅದರಂತೆ, ತಾವು ಸಹ ತಮ್ಮ ಆರೋಗ್ಯದ ಕಡೆ ಗಮನ ಹರಿಸಿ ಪಾಲಿಕೆಯ ವತಿಯಿಂದ ಒದಗಿಸುವ ಸುರಕ್ಷಿತ ಸಾಮಗ್ರಿಗಳನ್ನು ಸರಿಯಾದ ರೀತಿಯಲ್ಲಿ ಬಳಸಿ ನಿಮ್ಮಗಳ ಆರೋಗ್ಯ ಕಾಪಾಡಿಕೊಳ್ಳಿ ಎಂದು ಸಲಹೆ ನೀಡಿದರು.

- ಆರೋಗ್ಯದ ಕಡೆ ಗಮನಹರಿಸಿ,ಸುರಕ್ಷಿತ ಸಾಮಗ್ರಿಗಳನ್ನು ಬಳಸಿ
- ತ್ಯಾಜ್ಯ ಸಂಗ್ರಹಿಸಿ ಸಾಗಣೆ ಮಾಡುವ ಕಾರ್ಯ ಶ್ರೇಷ್ಠ

ವಿಶೇಷ ಆಯುಕ್ತ ಕರೀಗೌಡ ಮಾತನಾಡಿ, ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಡಾಕ್ಟರ್‌ಗಳೆಂದರೆ ನೀವೇ. ಅದರು ಜವಾಬ್ದಾರಿಯುವವಾಗಿ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದ ಅವರು, ನೀವೆಲ್ಲರೂ ತಮ್ಮ ಕರ್ತವ್ಯದಿಂದಾಗಿ ನಗರದಲ್ಲಿ ಪ್ರತಿ ಕ್ಷಣ ಹಾಗೂ ದಿನ ನಿತ್ಯ ಉತ್ಪಾದನೆಯಾಗುವ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಣೆ ಮಾಡುವ ಕಾರ್ಯ ನಿರ್ವಹಿಸುತ್ತಿರುವ ತಮ್ಮ ಕೆಲಸ ಶ್ರೇಷ್ಠ. ಅದರಿಂದಾಗಿ ನಗರದ ಆರೋಗ್ಯ ಕಾಪಾಡಿ, ನಗರದಲ್ಲಿ ವಾಸಿಸುವ ಜನರ ಹಾಗೂ ಅವರ ವ್ಯವಹಾರಕ್ಕೆ ಸಹಕಾರಿಯಾಗಿದೆ ಎಂದರು.

ದಿ ಬೆಂಗಳೂರು ಸಿಟಿ ಕಾರ್ಪೊರೇಷನ್ ವರ್ಕರ್ಸ್ ಫೆಡರೇಶನ್ ಅಧ್ಯಕ್ಷ ಡಾ.ಬಾಬು, ಕಾರ್ಮಿಕ ಸಮುದಾಯದ ಮಾರ್ಗದರ್ಶಕ ಭೀಮಜ್ಯೋತಿ ಶ್ರೀನಿವಾಸ್, ಕೆಎಸ್‌ಪಿಎಸ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಗಂಗಾಧರ್ ಮತ್ತಿತರರಿದ್ದರು.

ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ನಗರದಲ್ಲಿ ಜನಮುಖಿ ಪ್ರತಿಷ್ಠಾನದ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರರಾದ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ದಿನೇಶ್ ಎ.ಎಸ್., ಟ್ರಸ್ಟಿಗಳಾದ ಜಯದೇವ್ ಸಿ.ಎಂ., ಮಂಜುನಾಥಚಾಂದ್, ನಾಗರಾಜು ಎಚ್. ಎನ್., ಚಂದ್ರಕಾಂತ್ ಕೊಡ್ವಾಡಿ, ಎ.ಎಸ್. ನಾಗರಾಜಸ್ವಾಮಿ, ಸವಿತಾ ಭಟ್ ಹಾಗೂ ಗೋಪಾಲ್ ಅವರ ಸೊಸೆ ಸುನಂದಾ ಪ್ರಸಾದ್ ಉಪಸ್ಥಿತರಿದ್ದರು.

ಪಿಜಿಗೆ ನುಗ್ಗಿ ಚಿನ್ನಾಭರಣ ದರೋಡೆ

ಮಹಿಳಾ ಬೆಸ್ಕಾಂ ಎಂಜಿನಿಯರ್‌ಗೆ ಚಾಕು ಇಟ್ಟು ಬೆದರಿಕೆ

ಸಂ.ಕ.ಸಮಾಚಾರ, ಬೆಂಗಳೂರು

ಹಾಡಹಗಲೇ ಲೇಡಿಸ್ ಪಿಜಿಗೆ ನುಗ್ಗಿದ ದರೋಡೆಕೋರ ಮಹಿಳಾ ಬೆಸ್ಕಾಂ ಎಂಜಿನಿಯರ್ ಕುತ್ತಿಗೆಗೆ ಚಾಕು ಇಟ್ಟು ಹೆದರಿಸಿ ಚಿನ್ನಾಭರಣ ಹಾಗೂ ಎರಡು ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿರುವ ಘಟನೆ ಯಲಹಂಕ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬೆಸ್ಕಾಂ ಅಸಿಸ್ಟೆಂಟ್ ಮಹಿಳಾ ಎಂಜಿನಿಯರ್‌ರೊಬ್ಬರು ಜುಡಿಷಿಯಲ್ ಲೇಔಟ್‌ನಲ್ಲಿರುವ ಲೇಡಿಸ್ ಪಿಜಿಗೆ ಕಳೆದ 15 ದಿನಗಳ ಹಿಂದೆಯಷ್ಟೆ ಸೇರಿದ್ದರು. ಆ.11ರಂದು ಎಂದಿನಂತೆ ಕೆಲಸಕ್ಕೆ ಹೋಗಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ಊಟಕ್ಕೆಂದು ಪಿಜಿಗೆ ಬಂದಿದ್ದಾರೆ. ಪಿಜಿಯ 3ನೇ ಮಹಡಿಯಲ್ಲಿರುವ ತಮ್ಮ ರೂಮಿಗೆ ಹೋದ ಕೆಲವೇ ನಿಮಿಷಗಳಲ್ಲಿ ಬಾಗಿಲು ಬಡಿದ ಶಬ್ದವಾಗಿದೆ. ಪಿಜಿಯವರೇ ಬಂದಿರಬಹುದೆಂದು ತಿಳಿದು ಅವರು ಬಾಗಿಲು ತೆಗೆಯುತ್ತಿದ್ದಂತೆ ದರೋಡೆಕೋರ ಇವರ ಕುತ್ತಿಗೆಯ ಬಳಿ ಚಾಕು ಇಟ್ಟು ಬೆದರಿಸಿ ಅವರು ಧರಿಸಿದ್ದ ಚಿನ್ನಾಭರಣಗಳನ್ನು ಬಿಚ್ಚಿಸಿಕೊಂಡಿದ್ದಲ್ಲದೇ, ರೂಮಿನ ಹಾಸಿಗೆ ಮೇಲಿದ್ದ ಎರಡು ಮೊಬೈಲ್‌ಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆ.

ಆ ಸಂದರ್ಭದಲ್ಲಿ ಏನು ಮಾಡುವುದೆಂದು ತೋಚದೆ ತಕ್ಷಣ ಯಲಹಂಕ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆಕೈಗೊಂಡಾಗ ಪಿಜಿಯ ಸ್ವಲ್ಪ ದೂರದ ಪೊದೆಯ ಬಳಿ ಎರಡು ಮೊಬೈಲ್‌ಗಳು ಪತ್ತೆಯಾಗಿವೆ. ದರೋಡೆಕೋರ ಬಿಸಾಡಿದ್ದ ಆ ಎರಡು ಮೊಬೈಲ್‌ಗಳನ್ನು ಪೊಲೀಸರು ವಶಕ್ಕೆ ಪಡೆದು ದರೋಡೆಕೋರರ ಪತ್ತೆಗೆ ಬಲೆ ಬೀಸಿದ್ದಾರೆ.

ಆರೋಗ್ಯ ಕವಚ ಉಪಕರಣ ಖರೀದಿಗೆ ಅನುಮೋದನೆ

ಬೆಂಗಳೂರು: ರಾಜ್ಯದಲ್ಲಿ 108 ಆಂಬುಲೆನ್ಸ್ ಸೇವೆಯನ್ನು ಬಲಪಡಿಸಲು ಕಮಾಂಡ್ ಕಂಟ್ರೋಲ್ ಸೆಂಟರ್ ಹಾಗೂ ಜಿಲ್ಲೆಗಳ ಕಂಟ್ರೋಲ್ ರೂಂಗಳಿಗೆ ಉಪಕರಣಗಳನ್ನು ಖರೀದಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

108 ಆಂಬುಲೆನ್ಸ್ ಸೇವೆಯಲ್ಲಿ ರಾಜ್ಯ ಮಟ್ಟದಿಂದ 112 ಎನ್‌ಜಿ ಇಆರ್‌ಎಸ್‌ಎಸ್ ತಂತ್ರಾಂಶವನ್ನು ಬಳಸಿಕೊಂಡು ಕಮಾಂಡ್ ಕಂಟ್ರೋಲ್ ಸೆಂಟರ್ ಅನ್ನು ಸ್ಥಾಪಿಸಲು ಹಾಗೂ ಜಿಲ್ಲಾಡಳಿತದ ಮೂಲಕ ಆಂಬುಲೆನ್ಸ್‌ಗಳ ವಿಕೇಂದ್ರೀಕೃತ ನಿರ್ವಹಣೆ ಮಾಡಲು 6.09 ಕೋಟಿ ರೂ.ಗಳ ಮೊತ್ತದ ಐಸಿಟಿ ಉಪಕರಣಗಳನ್ನು ಖರೀದಿಸಬೇಕಾಗಿದ್ದು ಈ ಉಪಕರಣಗಳನ್ನು ಕೆಟಿಟಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಖರೀದಿಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿ ವಿ.ಪದ್ಮ ಅವರು ಬುಧವಾರ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಗೆ ಹಾಜರಾಗದಿದ್ದರೆ ನೋಟಿಸ್

ಸಂ.ಕ.ಸಮಾಚಾರ, ಯಲಹಂಕ

79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಉಪನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ಆಚರಿಸಲು ನಿರ್ಧರಿದಲಾಗಿದೆ. ತಾಲೂಕಿನ ಸರ್ಕಾರಿ ಅಧಿಕಾರಿ, ಸಿಬ್ಬಂದಿ ತಪ್ಪದೇ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ತಹಶೀಲ್ದಾರ್ ಶ್ರೇಯಸ್ .ಜಿ.ಎಸ್. ಹೇಳಿದರು.ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿಯ ಸ್ವಾತಂತ್ರ್ಯದಿನಾಚರಣೆಯನ್ನುಹೊಯ್ಸಳ ಮೈದಾನದಲ್ಲಿ ವಿಜೃಂಭಣೆಯಿಂದ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಆ.15ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಎಲ್ಲರೂ ಹಾಜರಾಗಬೇಕು, ತಾಲೂಕಿನ ಎಲ್ಲಾ ಸರ್ಕಾರಿ ಅಧಿಕಾರಿ ಸಿಬ್ಬಂದಿ ಹಾಜರಾಗದಿದ್ದರೆ ಅವರಿಗೆ ನೋಟಿಸ್ ಜಾರಿ ಮಾಡಿ ಕ್ರಮ ತೆಗೆದುಕೊಳ್ಳಾಗುವುದು ಎಂದು ಹೇಳಿದರು.

ಬೆಂಗಳೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶೈಲಾ.ಆರ್. ಎನ್ ಮಾತನಾಡಿ, ಕಾರ್ಯಕ್ರಮದಲ್ಲಿ ಮೊದಲನೆಯದಾಗಿ ಪಥ ಸಂಚಲನಕ್ಕೆ 16 ತಂಡಗಳು ಭಾಗವಹಿಸಲಿದ್ದು ಇದರಲ್ಲಿ 13 ತಂಡದ ಶಾಲಾ ವಿದ್ಯಾರ್ಥಿಗಳು, 3 ಪೊಲೀಸ್ ಇಲಾಖೆ ತಂಡ, ಬಿಬಿಎಂಪಿ ವ್ಯಾದ್ಯಗೋಷ್ಠಿಗಳು ಭಾಗವಹಿಸಲಿದ್ದಾರೆ. ಶಾಲಾ, ಕಾಲೇಜಿನ ಮಕ್ಕಳು 8 ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲು ಸಜ್ಜುಗೊಳಿಸಲಾಗಿದೆ. ಸಂಭ್ರಮಾಚರಣೆ ವಿಶೇಷತೆಯೆಂದರೆ ರಾಷ್ಟ್ರಮಟ್ಟದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳನ್ನು ಹಾಗೂ ಪ್ರಸ್ತಕ ವರ್ಷದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದು ಮಾಹಿತಿ ನೀಡಿದರು.

ರಾಜ್ಯಪಾಲರ ಹೆಸರಲ್ಲಿ ನಕಲಿ ಫೇಸ್‌ಬುಕ್ ಖಾತೆ: ಕೇಸ್

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಹೆಸರಲ್ಲಿ ನಕಲಿ ಫೇಸ್‌ಬುಕ್ ಖಾತೆ ತೆರೆಯಲಾಗಿದ್ದು ಈ ಸಂಬಂಧ ಕೇಂದ್ರ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ನೀಡಿದ ದೂರು ಆಧರಿಸಿ ಭಾರತೀಯ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಹೆಸರಲ್ಲಿ ತೆರೆದ ಫೇಸ್‌ಬುಕ್ ಖಾತೆಯಿಂದ ಕಿಡಿಗೇಡಿಯೊಬ್ಬ ಸಾರ್ವಜನಿಕರಿಗೆ ಸಂದೇಶ ಕಳುಹಿಸುತ್ತಿರುವುದು ಗೊತ್ತಾಗಿದೆ. ನಕಲಿ ಖಾತೆ ತೆರೆದಿರುವ ಆರೋಪಿಯನ್ನು ಪತ್ತೆ ಹಚ್ಚಿ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹಾವುಗಳ ಸಾಗಣೆ: ಸೆರೆ

ಬೆಂಗಳೂರು: ವಿದೇಶದಿಂದ ಅಕ್ರಮವಾಗಿ ಸಾಗಿಸುತ್ತಿದ್ದ ನಿಷೇಧಿತ ಪ್ರಾಣಿ ಹಾಗೂ ಅಪರೂಪದ ತಳಿಯ ಹಾವುಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿರುವ ಘಟನೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದೆ. ಇದೇ ವೇಳೆ ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ಬಂದ ಪ್ರಯಾಣಿಕನನ್ನುವಶಕ್ಕೆಪಡೆದು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ.

ಇಂಡಿಗೋ 6ಇ1056 ವಿಮಾನದಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕನನ್ನು ವಶಕ್ಕೆ ಪಡೆಯಲಾಗಿದ್ದು ಲಗೇಜ್ ಬ್ಯಾಗ್ ಪರಿಶೀಲನೆ ವೇಳೆ ಬಾಕ್ಸ್‌ಗಳಲ್ಲಿ ಇಟ್ಟಿದ್ದ ಹಾವು ಸೇರಿದಂತೆ ಇತರೆ ಪ್ರಾಣಿಗಳು ಪತ್ತೆಯಾಗಿದೆ. ಎಲ್ಲಾ ಪ್ರಾಣಿಗಳನ್ನು ವಶಕ್ಕೆ ಪಡೆದು ಅರಣ್ಯ ಇಲಾಖೆ ಅಧಿಕಾರಿಗಳ ನೀಡಲಾಗಿದೆ. ಇತ್ತೀಚೆಗೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡ್ರಗ್ಸ್ ಸಾಗಣೆ ಮಾಡುತ್ತಿದ್ದ ದುಷ್ಕರ್ಮಿಗಳನ್ನು ಸೆರೆಹಿಡಿಯಲಾಗಿತ್ತು. ಈ ಹಿನ್ನೆಲೆಯಲ್ಲಿನಿಷೇಧಿತಪ್ರಾಣಿಯನ್ನು ಸಾಗಿಸುತ್ತಿದ್ದ ವ್ಯಕ್ತಿಯನ್ನು ಇದೀಗ ಬಂಧಿಸಲಾಗಿದೆ.

ಬಿಎಂಟಿಸಿ ಬಸ್ ಚಕ್ರಕ್ಕೆ ಸಿಕ್ಕಿ ಬೈಕ್ ಸವಾರ ದುರ್ಮರಣ

ಅಪರಾಧ ಸುದ್ದಿಗಳು

ಸಂ.ಕ.ಸಮಾಚಾರ, ಬೆಂಗಳೂರು

ಬಿಎಂಟಿಸಿ ಬಸ್ ಆಟೋಗೆ ಡಿಕ್ಕಿ ಹೊಡೆದಿದ್ದರಿಂದ ಬಸ್‌ನ ಹಿಂದಿನ ಚಕ್ರ ಬೈಕ್ ಸವಾರನೊಬ್ಬನ ಮೇಲೆ ಹರಿದ ಪರಿಣಾಮ ಆತನ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬುಧವಾರ ಮಧ್ಯಾಹ್ನ 2.15ರ ಸುಮಾರಿಗೆ ರೂಪೇನಾ ಅಗ್ರಹಾರ ಸಮೀಪ ನಡೆದಿದೆ.

ಚಂದಾಪುರದಿಂದ ಬನಶಂಕರಿಗೆ ಸಂಚರಿಸುತ್ತಿದ್ದ ಬಿಎಂಟಿಸಿ ಬಸ್ ಆಟೋಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಬಸ್‌ನ ಹಿಂದಿನ ಚಕ್ರ ಬೈಕ್ ಸವಾರನ ಮೇಲೆ ಹರಿದಿದ್ದು ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಆದರೆ ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಸುದ್ದಿ ತಿಳಿದ ಕೂಡಲೇ ಮಡಿವಾಳ ಪೊಲೀಸರು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ, ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ANAND RATHI — ಆನಂದ್ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್
ಎಕ್ಸ್‌ಪ್ರೆಸ್ ವಲಯ, ಎ ವಿಂಗ್, 10ನೇ ಮಹಡಿ, ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ಓಬೆರಾಯ್ ಮಾಲ್ ಎದುರು ಕರ್ಣೀಯವಾಗಿ, ಗೋರೆಗಾಂವ್ (ಪೂ), ಮುಂಬೈ – 400 063, ಭಾರತ.

ತಗಾದೆ ಸೂಚನೆ

ಆದಾಗ್ಯೂ, ಈ ಕೆಳಗಿನ ಸಾಲಗಾರರು / ಸಹ–ಸಾಲಗಾರರು **ಆನಂದ್‌ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್‌ನಿಂದ** ಆರ್ಥಿಕ ಸಹಾಯವನ್ನು ಪಡೆದಿದ್ದಾರೆ. ಆರ್ಥಿಕ ಸಹಾಯ ಪಡೆದಿದ್ದರೂ ಸಹ, ಸಾಲಗಾರರು / ಸಹ–ಸಾಲಗಾರರು ಬಾಕಿಯ ಪ್ರಕಾರ ಬಡ್ಡಿ ಮತ್ತು ಅಸಲು ಮೊತ್ತವನ್ನು ನಿಗದಿತ ದಿನಾಂಕದಲ್ಲಿ ಮರುಪಾವತಿಯಲ್ಲಿ ವಿವಿಧ ತಪ್ಪುಗಳನ್ನು ಎಸೆದಿದ್ದಾರೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹೊರಡಿಸಿದ ನಿರ್ದೇಶನಗಳು / ಮಾರ್ಗಸೂಚನೆಗಳ ಅನುಸಾರವಾಗಿ ಇಲ್ಲಿ ಉಲ್ಲೇಖಿಸಲಾದ ಆಯಾ ದಿನಾಂಕಗಳಲ್ಲಿ ಖಾತೆಯನ್ನು ಅನುತ್ಪಾದಕ ಆಸ್ತಿ ಎಂದು ವರ್ಗೀಕರಿಸಲಾಗಿದೆ. ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯಿದೆ 2002ರ ಅಡಿಯಲ್ಲಿ **ಆನಂದ್‌ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿ** ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002ರ ಸೆಕ್ಷನ್ 13(2) ಅಡಿಯಲ್ಲಿ ನಿಯಮ 3 ರೊಂದಿಗೆ ಓದಿಕೊಂಡಂತೆ ಸರ್ಫೇಸಿ ಕಾಯಿದ 2002ರ ಸೆಕ್ಷನ್ 13(2) ಅಡಿಯಲ್ಲಿ ಇಲ್ಲಿ ಉಲ್ಲೇಖಿಸಲಾದ ದಿನಾಂಕಗಳಲ್ಲಿ ಈ ಕೆಳಗಿನ ಸಾಲಗಾರರು / ಅಡಮಾನುದಾರರಿಗೆ ತಗಾದೆ ಸೂಚನೆಯನ್ನು ನೀಡಿದ್ದಾರೆ. ನೋಟೀಸ್‌ನಲ್ಲಿ ನಮೂದಿಸಲಾದ ಮೊತ್ತವನ್ನು ಹೆಚ್ಚಿನ ಬಡ್ಡಿಯೊಂದಿಗೆ ನೋಟೀಸ್‌ಗಳಲ್ಲಿ ನಮೂದಿಸಲಾದ ಮೊತ್ತ ಮತ್ತು ಪ್ರಾಸಂಗಿಕ ವೆಚ್ಚಗಳ ಮೇಲಿನ ಒಪ್ಪಂದದ ದರದಲ್ಲಿ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಯ ದಿನಾಂಕದವರೆಗೆ ವೆಚ್ಚ, ಶುಲ್ಕಗಳು ಇತ್ಯಾದಿ ಸೇರಿ ಮರು ಪಾವತಿಸಲು ಕರೆ ನೀಡಲಾಗಿದೆ.

ಸಾಲಗಾರ / ಸಹ ಸಾಲಗಾರರ ಹೆಸರು ಮತ್ತು ವಿಳಾಸ	ಎನ್.ಪಿ.ಎ. ದಿನಾಂಕ		
(1) **ಶ್ರೀ ಜೋಶಿಲ್ ಆಂಡ್ರ್ಯೂಸ್** (ಸಾಲಗಾರ), ನಂ. 18, ಹೈಸ್ ಗ್ರೇಸ್, 10ನೇ ಮೇನ್, ಗಣೇಶ ದೇವಸ್ಥಾನದ ನಂತರ, ಪ್ರಶಾಂತಿ ನಗರ, ಇಸ್ರೋ ಲೇಔಟ್, ಬೆಂಗಳೂರು – 560078. (2) **ಶಶಿ ಆಂಡ್ರ್ಯೂಸ್** (ಸಹ–ಸಾಲಗಾರ), ನಂ. 18, ಹೈಸ್ ಗ್ರೇಸ್, 10ನೇ ಮೇನ್, ಗಣೇಶ ದೇವಸ್ಥಾನದ ನಂತರ, ಪ್ರಶಾಂತಿ ನಗರ, ಇಸ್ರೋ ಲೇಔಟ್, ಬೆಂಗಳೂರು – 560078. **ಸ್ಥಿರಾಸ್ತಿಯ ವಿಳಾಸ:** ಫ್ಲಾಟ್ ನಂ. ಎಫ್–402, 4ನೇ ಮಹಡಿ, ಆಟ್ರಿಯಮ್ ಹೈಟ್ಸ್, ಆಸ್ತಿ ನಂ. 17 ಮತ್ತು 18, ಬಿಕಾಸಿಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು – 560078, ಕರ್ನಾಟಕ, ಭಾರತ. **ಚಕ್ಕುಬಂಧಿ ಈ ರೀತಿ ಇದೆ : ಪೂರ್ವಕ್ಕೆ :** ರಸ್ತೆ, **ಪಶ್ಚಿಮಕ್ಕೆ :** ಆಸ್ತಿ ನಂ. 16, **ಉತ್ತರಕ್ಕೆ :** ಇಸ್ರೋ ಲೇಔಟ್, **ದಕ್ಷಿಣಕ್ಕೆ :** ರಸ್ತೆ	08-08-2025 / ತಗಾದೆ ಸೂಚನೆ ದಿನಾಂಕ: 13-08-2025 / ಸಾಲದ ಮೊತ್ತ: ರೂ. 53,00,000/-	ಆರ್.ಓ.ಐ.	13.00%
		ಪ್ರಧಾನ ಬಾಕಿ ಮೊತ್ತ	5,037,356
		ಇ.ಎಂ.ಐ. ಬಾಕಿ ಮೊತ್ತ	268,232
		ಮುರಿದ ಅವಧಿಯ ಬಡ್ಡಿ	1,819
		ನಿಗದಿಯ ಬಡ್ಡಿಯ ಮೊತ್ತ	8,785
		ಕಾನೂನು ವೆಚ್ಚ	-
		ನೋಟೀಸ್ ವೆಚ್ಚಗಳು	1,100
		ಇ.ಎಂ.ಡಿ. ಬೌನ್ಸ್ ವೆಚ್ಚಗಳು	5,000
ಬಾಕಿ ಮೊತ್ತ ರೂ. 53,22,292/- APPL00006917		ಬರಬೇಕಾದ ಒಟ್ಟು ಮೊತ್ತ	53,22,292

ಮೇಲೆ ತಿಳಿಸಿದಂತೆ, ಈ ಮೂಲಕ ಸೂಚನೆ ನೀಡುವುದೇನೆಮದರೆ ಮೇಲಿನ ಸಾಲಗಾರರಿಗೆ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ ಮೇಲೆ ತಿಳಿಸಿದ ಬಾಕಿಗಳನ್ನು ಪಾವತಿಸಲು ಕೋರಲಾಗಿದೆ. ವಿಫಲವಾದರೆ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002ರ ಸೆಕ್ಷನ್ 13(4) ರ ಅಡಿ ಮತ್ತು ಅನ್ವಯವಾಗುವ ನಿಯಮ ಅಡಿಯಲ್ಲಿ ಸಾಲಗಾರರು ಮತ್ತು ಅಡಮಾನುದಾರರ ಭದ್ರತಾ ಆಸ್ತಿಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೇರಿದಂತೆ ಭದ್ರತಾ ಸ್ವತ್ತುಗಳ ವಿರುದ್ಧ ಈ ನೋಟೀಸ್ ದಿನಾಂಕದಿಂದ 60 ದಿನಗಳ ಮುಕ್ತಾಯದ ನಂತರ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಸೂಚನೆಯ ಪ್ರತಿಕ್ರಿಯೆಗಾಗಿ ನೀವು ಯಾವುದೇ ಪ್ರಾತಿನಿಧ್ಯವನ್ನು ಮಾಡಲು ಬಯಸಿದರೆ, ದಯವಿಟ್ಟು ನಮ್ಮ ಅಧಿಕೃತ ಅಧಿಕಾರಿಗಳಾದ ಶ್ರೀ ಅಭಿಷೇಕ್ ಚಂದ್, ಆನಂದ್‌ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್, 8ನೇ ಮಹಡಿ 'ಎ' ವಿಂಗ್, ಎಕ್ಸ್‌ಪ್ರೆಸ್ ಝೋನ್ ಬಿಲ್ಡಿಂಗ್, ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ರೋಡ್, ಗೋರೆಗಾಂವ್ (ಪೂ), ಮುಂಬೈ – 40063 ಇಲ್ಲಿಗೆ ಸಮಯಕ್ಕೆ ಸರಿಯಾಗಿ ಪ್ರತಿಕ್ರಿಯೆ ನೀಡಲು ನಿಮಗೆ ಅನುವು ಮಾಡಿಕೊಡಲಾಗಿದೆ. ಈ ಸೂಚನೆಯ ಪ್ರತಿಕ್ರಿಯೆಯಾಗಿ ಮಾಡಿದ ನಿಮ್ಮ ಯಾವುದೇ ಪ್ರಾತಿನಿಧ್ಯಗಳನ್ನು ಯಾವುದೇ ವ್ಯಕ್ತಿ ಅಥವಾ ಸ್ಥಳಕ್ಕೆ ತಿಳಿಸಿದರೆ ಅದಕ್ಕೆ ಪ್ರತಿಕ್ರಿಯಿಸದಿರಲು ನಾವು ಜವಾಬ್ದಾರರಾಗಿರುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ, ಸದರಿ ಕಾಯಿದೆಯ ಸೆಕ್ಷನ್ 13(13)ರ ಅಡಿಯಲ್ಲಿ, ಯಾವುದೇ ಸಾಲಗಾರನು ಭದ್ರತಾ ಸಾಲಗಾರನ ಪೂರ್ವ ಲಿಖಿತ ಒಪ್ಪಿಗೆಯಿಲ್ಲದೆ ನೋಟೀಸ್‌ನಲ್ಲಿ ಉಲ್ಲೇಖಿಸಲಾದ ತನ್ನ ಯಾವುದೇ ಭದ್ರತಾ ಸ್ವತ್ತುಗಳನ್ನು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾವಣೆ ಮಾಡಬಾರದು ಎಂಬುದನ್ನು ದಯವಿಟ್ಟು ಗಮನಿಸಿ.

ದಿನಾಂಕ : 13-08-2025, ಸ್ಥಳ : ಬೆಂಗಳೂರು — ಸಹಿ/- ಆನಂದ್ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್, ಅಧಿಕೃತ ಅಧಿಕಾರಿಗಳು

ARKA — ಅರ್ಕಾ ಫಿನ್‌ಕ್ಯಾಪ್ ಲಿಮಿಟೆಡ್
ನೋಂದಣಿ ಕಚೇರಿ: – 2504, 25ನೇ ಮಹಡಿ, ಒಂದು ಲೋಧಾ ಪ್ಲೇಸ್, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ–400013, ಮಹಾರಾಷ್ಟ್ರ, ಇಮೇಲ್: customercare@arkaholdings.com.
CIN ಸಂಖ್ಯೆ:– U65993MH2018PLC308329, ಸಂಪರ್ಕ ಸಂಖ್ಯೆ. 022 40471000 ಮೊಬೈಲ್: 90221 89570

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆ 2002ರ ಸೆಕ್ಷನ್ 13(2) ರ ಅಡಿಯಲ್ಲಿ ಸೂಚನೆ

ಕೆಳಗೆ ಸಹಿ ಮಾಡಿರುವ ಅರ್ಕಾ ಫಿನ್‌ಕ್ಯಾಪ್ ಲಿಮಿಟೆಡ್ ("AFL") ನ ಅಧಿಕೃತ ಅಧಿಕಾರಿಯಾಗಿರುವ ನಾನು, ಅರ್ಕಾ ಫಿನ್‌ಕ್ಯಾಪ್ ಲಿಮಿಟೆಡ್‌ನಿಂದ ನೀಡಲಾದ/ನೀಡಲಾದ ಆಸ್ತಿ ವಿರುದ್ಧ ಸಾಲದ ಅಡಿಯಲ್ಲಿ ಸಂಗ್ರಹವಾದ ಸಾಲದ ಮೊತ್ತದ ಅಸಲು ಹಾಗೂ ಬಡ್ಡಿ ಮತ್ತು ಇತರ ಶುಲ್ಕಗಳನ್ನು ಮರುಪಾವತಿಸುವಲ್ಲಿ ಉದ್ದೇಶಪೂರ್ವಕವಾಗಿ ತಮ್ಮ ಕಾನೂನು ಮತ್ತು ಒಪ್ಪಂದದ ಹೊಣೆಗಾರಿಕೆಯನ್ನು (ಗಳನ್ನು) ಪೂರೈಸಲು ವಿಫಲರಾದ ಕೆಳಗೆ ತಿಳಿಸಲಾದ ಸಾಲಗಾರರಿಗೆ ಈ ಕೆಳಗಿನ ಸೂಚನೆಯನ್ನು ನೀಡುತ್ತಿದ್ದೇನೆ ಮತ್ತು ಇದರ ಪರಿಣಾಮವಾಗಿ, ಅನ್ವಯವಾಗುವ ಆರ್‌ಬಿಐ ನಿಯಮಗಳಿಗೆ ಅನುಸಾರವಾಗಿ ಸದರಿ ಸಾಲ(ಗಳು) AFL ನ ಪುಸ್ತಕಗಳಲ್ಲಿ ಅನುತ್ಪಾದಕ ಆಸ್ತಿಗಳು (NPA) ಆಗಿವೆ. ಅದರಂತೆ, ಅವರಿಗೆ ನೋಂದಾಯಿತ ಅಂಚೆ ಮೂಲಕ ಅವರ ಕೊನೆಯ ಪರಿಚಿತ ವಿಳಾಸಗಳಲ್ಲಿ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆ 2002ರ ಸೆಕ್ಷನ್ 13(2) ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳ ಅಡಿಯಲ್ಲಿ ("ಸರ್ಫೇಸಿ ಕಾಯ್ದೆ") ತಗಾದೆ ನೋಟಿಸ್ ನೀಡಲಾಗಿದೆ. ಆದರೆ ವಿವಿಧ ಕಾರಣಗಳಿಗಾಗಿ ಅವರೆಲ್ಲರಿಗೂ ನೋಟಿಸ್‌ಗಳನ್ನು ತಲುಪಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, ಸದರಿ ಸಾಲಗಾರರು AFL ಪರವಾಗಿ ಅವರು ರಚಿಸಿದ ಭದ್ರತೆ ವಿರುದ್ಧ AFL ನಿಂದ ಪಡೆದ ಆಸ್ತಿ ಸೌಲಭ್ಯಗಳ ಮೇಲಿನ ಸಾಲದ ಅಡಿಯಲ್ಲಿ ಅವರ ಸಂಪೂರ್ಣ ಬಾಕಿಯನ್ನು ತೆರವುಗೊಳಿಸಲು ಈ ತಗಾದೆ ನೋಟಿಸ್ ಅನ್ನು ಪ್ರಕಟಿಸುವ ಮೂಲಕ ತಿಳಿಸಲಾಗಿದೆ, ಅದರ ವಿವರಗಳನ್ನು ಇಲ್ಲಿ ಕೆಳಗೆ ನಿರ್ದಿಷ್ಟಪಡಿಸಲಾಗಿದೆ:

ಸಾಲ ಖಾತೆ ಸಂಖ್ಯೆ	ಸಾಲಗಾರ(ರು) ವಿವರಗಳು	ತಗಾದೆ ಸೂಚನೆ ವಿವರಗಳು ಮತ್ತು ಎನ್‌ಪಿಎ ದಿನಾಂಕ
2002004805	**ಸಾಲಗಾರ:** ಮೆಸರ್ಸ್ ಎ ಮತ್ತು ವೈ ವೆಂಚರ್ಸ್ **ಸಹ–ಸಾಲಗಾರರು:** 1. ಶ್ರೀ ಕಿರಣ್ ಜಯಮ್ಮ ಶಶಿಧರ್ 2. ಶ್ರೀಮತಿ ಕೆಟೋಲಿ ಶಶಿಧರ್ ಯಜ್ಞ 3. ಶ್ರೀಮತಿ ಕಿರಣಗೂರು ತಿಮ್ಮೇಗೌಡ ಶಶಿಧರ್	ರೂ. 87,51,385.14/– (ರೂಪಾಯಿ ಎಂಬತ್ತೇಳು ಲಕ್ಷ ಐವತ್ತೊಂದು ಸಾವಿರದ ಮುನ್ನೂರ ಎಂಬತ್ತೈದು ಮತ್ತು ಹದಿನಾಲ್ಕು ಪೈಸೆ ಮಾತ್ರ) **ತಗಾದೆ ಸೂಚನೆ ದಿನಾಂಕ** – 06/08/2025 **NPA ದಿನಾಂಕ** – 03.08.2025

ಆಸ್ತಿ ವಿವರಗಳು : ಆಸ್ತಿ 1: ಸ್ವತ್ತಿನ ಎಲ್ಲ ಭಾಗ ವಿಭಾಗ ಸೇರಿ ಎರಡನೇ ಮಹಡಿಯಲ್ಲಿ ಸಂಖ್ಯೆ 201 ಮೂರು ಮಲಗುವ ಕೋಣೆ ಅಪಾರ್ಟ್‌ಮೆಂಟ್ ವಸತಿ ಆಸ್ತಿ, 1530 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ, ಒಂದು ಕಾರು ಪಾರ್ಕಿಂಗ್ ಸ್ಲಾಟ್ ಅನ್ನು ಹೊಂದಿದೆ, ಇದು "ಸಾಯಿ ಸುಮುಖ ಲಕ್ಸುರಿಯೇಟ್" ಎಂದು ಕರೆಯಲ್ಪಡುವ ಬಹುಮಹಡಿ ವಸತಿ ಸಂಕೀರ್ಣದ ಭಾಗವಾಗಿದೆ ಮತ್ತು ಸೈಟ್ ಸಂಖ್ಯೆ 69 ರ ಪಶ್ಚಿಮ ಭಾಗವನ್ನು ಹೊಂದಿರುವ ಆಸ್ತಿಯಲ್ಲಿ 401 ಚದರ ಅಡಿ ಅವಿಭಜಿತ ಪಾಲು ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಹೊಂದಿದೆ, ಹಿಂದಿನ ಕಥಾ ಸಂಖ್ಯೆ 189 ನಂತರ ಕಥಾ ಸಂಖ್ಯೆ 177/69, ಪ್ರಸ್ತುತ ಬಿಬಿಎಂಪಿ ಕಥಾ ಸಂಖ್ಯೆ 3550/2207/183/69, ನಲ್ಲಿ ಇದೆ ಕೊತ್ತನೂರು ಗ್ರಾಮಠಾಣ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಚಕಬಂದಿ: ಪೂರ್ವ: – ಆಸ್ತಿ ನಿವೇಶನ ಸಂಖ್ಯೆ 70; ಪಶ್ಚಿಮ: – ಆಸ್ತಿಯ ಒಂದು ಭಾಗ ಶ್ರೀಮತಿ ರುಕ್ಮಿಣಿ ಅವರಿಗೆ ಸೇರಿದೆ; ಉತ್ತರ: – ಆಸ್ತಿ ಹೊಂದಿರುವ ನಿವೇಶನ ಸಂಖ್ಯೆ 68; ದಕ್ಷಿಣ: – 50 ಅಡಿ ರಸ್ತೆ ಮತ್ತು

ಆಸ್ತಿ 2: ಸ್ವತ್ತಿನ ಎಲ್ಲ ಭಾಗ ವಿಭಾಗ ಸೇರಿ ಮೂರನೇ ಮಹಡಿಯಲ್ಲಿ ಮೂರು ಮಲಗುವ ಕೋಣೆ ಅಪಾರ್ಟ್‌ಮೆಂಟ್ ಸಂಖ್ಯೆ 302 ವಸತಿ ಆಸ್ತಿ, 1490 ಚದರ ಅಡಿ ವಿಸ್ತೀರ್ಣದ ಸೂಪರ್ ಬಿಲ್ಟ್ ಅಪ್ ಪ್ರದೇಶ, ಒಂದು ಕಾರು ಪಾರ್ಕಿಂಗ್ ಸ್ಲಾಟ್ "ಸಾಯಿ ಸುಮುಖ ಲಕ್ಸುರಿಯೇಟ್" ಎಂದು ಕರೆಯಲ್ಪಡುವ ಬಹುಮಹಡಿ ವಸತಿ ಸಂಕೀರ್ಣದ ಭಾಗವಾಗಿದೆ, ಜೊತೆಗೆ ಸೈಟ್ ಸಂಖ್ಯೆ 69 ರ ಪಶ್ಚಿಮ ಭಾಗವನ್ನು ಹೊಂದಿರುವ ಆಸ್ತಿಯಲ್ಲಿ 401 ಚದರ ಅಡಿ ಅವಿಭಜಿತ ಪಾಲು ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಹೊಂದಿದೆ. ಹಿಂದಿನ ಕ್ಯಾಥಾ ಸಂಖ್ಯೆ 189 ನಂತರ ಕ್ಯಾಥಾ ಸಂಖ್ಯೆ 177/69, ಪ್ರಸ್ತುತ ಬಿಬಿಎಂಪಿ ಕ್ಯಾಥಾ ಸಂಖ್ಯೆ 3550/2207/183/69, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿಯ ಕೊತ್ತನೂರು ಗ್ರಾಮಠಾಣ ಮತ್ತು ಚಕಬಂದಿ: ಪೂರ್ವ: – ಸೈಟ್ ಸಂಖ್ಯೆ 70 ಹೊಂದಿರುವ ಆಸ್ತಿ; ಪಶ್ಚಿಮ: – ಆಸ್ತಿಯ ಭಾಗ ಶ್ರೀಮತಿ ರುಕ್ಮಿಣಿ ಅವರಿಗೆ ಸೇರಿದೆ; ಉತ್ತರ: – ಸೈಟ್ ಸಂಖ್ಯೆ 68 ಹೊಂದಿರುವ ಆಸ್ತಿ; ದಕ್ಷಿಣ: – 50 ಅಡಿ ರಸ್ತೆ.

SARFAESI ಕಾಯ್ದೆಯ ನಿಬಂಧನೆಗಳ ಪ್ರಕಾರ ಬೇಡಿಕೆ ಸೂಚನೆ(ಗಳ) ಈ ಬದಲಿ ಸೇವೆ/ಪ್ರಕಟಣೆಯನ್ನು ಮಾಡಲಾಗುತ್ತಿದೆ. ಮೇಲೆ ತಿಳಿಸಲಾದ ಸಾಲಗಾರರು/ರು ಈ ತಗಾದೆ ಸೂಚನೆ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗೆ ಅನ್ವಯವಾಗುವ ಇತರ ಶುಲ್ಕಗಳೊಂದಿಗೆ ಮೇಲೆ ತಿಳಿಸಿದ ಎಲ್ಲಾ ಮೊತ್ತಗಳ ಪಾವತಿಗಳನ್ನು ಮಾಡಲು ಸೂಚಿಸಲಾಗಿದೆ. ವಿಫಲವಾದರೆ (ಸಾಲ ಒಪ್ಪಂದದ ನಿಯಮಗಳು ಮತ್ತು ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ AFL ಗೆ ಲಭ್ಯವಿರುವ ಯಾವುದೇ ಇತರ ಹಕ್ಕುಗಳು ಮತ್ತು ಪರಿಹಾರಗಳಿಗೆ ಹಾನಿಯಾಗದಂತೆ, ಮೇಲೆ ನಿರ್ದಿಷ್ಟಪಡಿಸಿದ ಭದ್ರತಾ ಸ್ವತ್ತುಗಳು/ಅಡಮಾನದ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಿನ ಕ್ರಮಗಳನ್ನು ಒಳಗೊಂಡಂತೆ ಮತ್ತು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಡೆಯಲು ಅದರ ನಂತರದ ಮಾರಾಟ/ಹರಾಜನ್ನು SARFAESI ಕಾಯ್ದೆಯ ಸೆಕ್ಷನ್ 13 (4) ರ ನಿಬಂಧನೆಗಳ ಅಡಿಯಲ್ಲಿ ಪ್ರಾರಂಭಿಸಲಾಗುತ್ತದೆ. ಮೇಲೆ ತಿಳಿಸಲಾದ ಪಕ್ಷಗಳು ಮತ್ತು/ಅಥವಾ ಅವರ ಪರವಾಗಿ ಮತ್ತು ಅವರ ಪರವಾಗಿ ಕಾರ್ಯನಿರ್ವಹಿಸುವ ಯಾವುದೇ ಇತರ ವ್ಯಕ್ತಿಗೆ ಮೊದಲ ವಿಶೇಷ ಶುಲ್ಕದ ಆಧಾರದ ಮೇಲೆ AFL ಪರವಾಗಿ ಅಡಮಾನ ಇಟ್ಟಿರುವ ಮೇಲೆ ತಿಳಿಸಲಾದ ಭದ್ರತಾ ಆಸ್ತಿಗಳನ್ನು ಯಾವುದೇ ರೀತಿಯಲ್ಲಿ ಮಾರಾಟ ಮಾಡಬಾರದು, ವರ್ಗಾಯಿಸಬಾರದು, ವಿಲೇವಾರಿ ಮಾಡಬಾರದು, ಒತ್ತೆ ಇಡಬಾರದು ಮತ್ತು/ಅಥವಾ ಯಾವುದೇ ಮೂರನೇ ವ್ಯಕ್ತಿಯ ಹಕ್ಕುಗಳು ಅಥವಾ ಆಸಕ್ತಿಯನ್ನು ರಚಿಸಬಾರದು ಎಂದು ಸೂಚಿಸಲಾಗಿದೆ.

ಭದ್ರತಾ ಸ್ವತ್ತುಗಳನ್ನು ಪುನಃ ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಕಾಯ್ದೆಯ ಸೆಕ್ಷನ್ 13ರ ಉಪ–ವಿಭಾಗ (8) ರ ನಿಬಂಧನೆಗಳಿಗೆ ಸಾಲಗಾರರ ಗಮನಕ್ಕೆ ತರಲಾಗಿದೆ. ನೀವು ಮತ್ತಷ್ಟು ಸದರಿ ಕಾಯಿದೆಯ ಸೆಕ್ಷನ್ 13(13) ರ ಪ್ರಕಾರ, ಮೇಲಿನ ಸುರಕ್ಷಿತ ಸ್ವತ್ತುಗಳು / ಅಡಮಾನದ ಆಸ್ತಿಗಳನ್ನು AFL ನ ಪೂರ್ವಾನುಮತಿಯಿಲ್ಲದೆ ವಿಲೇವಾರಿ ಮಾಡುವುದರಿಂದ ಅಥವಾ ವ್ಯವಹರಿಸುವುದರಿಂದ ಅಥವಾ ಸುರಕ್ಷಿತ ಆಸ್ತಿಯ ಮಾರಾಟ, ಗುತ್ತಿಗೆ ಅಥವಾ ಇತರ ವಿಧಾನಗಳ ಮೂಲಕ ವರ್ಗಾವಣೆ ಮಾಡುವುದರಿಂದ ನಿಮ್ಮನ್ನು ನಿರ್ಬಂಧಿಸಲಾಗಿದೆ / ನಿಷೇಧಿಸಲಾಗಿದೆ ಎಂಬುದನ್ನು ಗಮನಿಸಲು ವಿನಂತಿಸಲಾಗಿದೆ." SARFAESI ಕಾಯ್ದೆ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ನಿಬಂಧನೆಯನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಕಾಯಿದೆಯಡಿಯಲ್ಲಿ ಒದಗಿಸಲಾದ ಜೈಲು ಶಿಕ್ಷೆ ಮತ್ತು/ಅಥವಾ ದಂಡ ಸೇರಿದಂತೆ ಎಲ್ಲಾ ಪರಿಣಾಮಗಳಿಗೆ ಹೊಣೆಗಾರನಾಗಿರುತ್ತಾನೆ."

ಅನುವಾದದಲ್ಲಿ ವ್ಯತ್ಯಾಸವಿದ್ದಲ್ಲಿ, ಇಂಗ್ಲಿಷ್ ಆವೃತ್ತಿಯನ್ನು ಗಮನಿಸಲು ಸಲಹೆ ನೀಡಲಾಗಿದೆ.

ಸ್ಥಳ: ಬೆಂಗಳೂರು — ಸಹಿ/– (ಅಧಿಕೃತ ಅಧಿಕಾರಿ)
ದಿನಾಂಕ: 14.08.2025 — ARKA FINCAP LIMITED
ಕಿರ್ಲೋಸ್ಕರ್ ಗ್ರೂಪ್ ಕಂಪನಿ
Kirloskar Proprietary Limited ಮತ್ತು ARKA Fineap Limited ಮಾಲೀಕತ್ವದ ಸಾಲಿನಲ್ಲಿ ಕಿರ್ಲೋಸ್ಕರ್' ಗುರುತು ಅನುಮತಿಸಲಾದ ಬಳಕೆದಾರ ಕಂಪನಿ.

MURUDESHWAR CERAMICS LTD.
Regd. Office : 604/B, Murudeshwar Bhavan, Gokul Road, Hubli - 580 030
Ph : (0836) 2331615-18; Fax : (0836) 4252583;
E-mail : mclho@naveentile.com; Web: www.naveentile.com
CIN : L26914KA1983PLC005401

CONSOLIDATED UNAUDITED FINANCIAL RESULTS FOR THE QUARTER ENDED 30.06.2025

(Rs. in Lakhs)

Sl. No.	Particulars	Quarter ending 30.06.2025	Previous Year ended 31.03.2025	Previous year quarter ended 30.06.2024
1.	Total Income from Operations	4,626.53	20,776.90	4,366.61
2.	Net Profit / (Loss) for the period (before Tax, Exceptional and/or Extra-ordinary items)	194.69	1,194.95	193.57
3.	Net Profit / (Loss) for the period before tax (after Exceptional and/or Extra-ordinary items)	194.69	1,194.95	193.57
4.	Net profit / (Loss) for the period after tax (after Exceptional and/or Extra-ordinary items)	194.69	992.46	191.72
5.	Share of Profit (Loss) of Associates Accounted for using Equity Method	-1.83	-8.49	9.46
6	Other comprehensive income	-	-23.72	-
7	Total Comprehensive Income for the period [Comprising Profit / (Loss) for the period (after tax) and Other Comprehensive income (after tax)]	192.86	960.25	201.18
8	Equity Share Capital	6,054.53	6,054.53	6,054.53
9	Reserves (excluding Revaluation Reserve) as shown in the Audited Balance Sheet of the previous year	31,153.01	31,153.01	30,495.50
10	Earnings Per Share (of Rs.10/- each) (for continuing and discontinued operations) - 1. Basic : 2. Diluted :	0.32 0.32	1.59 1.59	0.33 0.33

Note:
1. The above results for the quarter ended 30th June, 2025 have been reviewed by the Audit Committee and approved by the Board of Directors in their meeting held on 13.08.2025 and Statutory Auditors of the Company have carried out a Limited Review.
2.

Stand Alone Financial Result:	Quarter ended 30.06.2025	Year to date Figures 31.03.2025	Previous year Quarter ended 30.06.2024
Income from Operation	4,626.53	20,776.90	4,366.61
Profit Before Tax	194.69	1,194.95	193.57
Profit After Tax	194.69	968.73	191.72

3. The above is an extract of the detailed format of Quarterly/Annual Financial Results filed with the Stock Exchange under Regulation 33 of the SEBI (Listing and Other Disclosure Requirements) Regulations, 2015, The full format of the Quarterly Financial Results are available in the Stock Exchange websites namely: www.bseindia.com (BSE), www.nseindia.com (NSE) and Company website : www.naveentile.com
4 In terms of section 129 of the Companies Act, 2013 the consolidated financial statement of the company has been prepared with RNS Power Limited an associate company in terms of section 2(6) of the companies Act, 2013.
5 The previous periods figures have been re-grouped / re-classified wherever necessary.

Place : Bengaluru
Date : 13.08.2025

By Order of the Board of Directors
For MURUDESHWAR CERAMICS LIMITED
Satish R Shetty
Chairman & Managing Director
DIN : 00037526

IN THE COURT OF XXVIII ADDL., CITY CIVIL AND SESSIONS JUDGE, AT BANGALORE
P & S.C No. 25079 / 2024 (CCH 29)

BETWEEN: 1) **Smt. B C Bhuvaneshwari,** W/o. Late. B Y Chidambar Suresh, Aged about 58 years,No.1035, 1st Main Road, Madduramma Temple, Manasa Nagar Nagarabhavi 1st Stage, VTC: Bangalore North - 560072,
2) **Mr. Tejeshwar B. C.** S/o. Chowdeshwarappa, Aged about 38 years, No.1035, 1st Main Road, Madduramma Temple, Manasa Nagar Nagarabhavi 1st Stage, VTC: Bangalore North - 560072,
3) **Lokeshwar B. C.** S/o. Chowdeshwarappa,Aged about 36 years No.1035, 1st Main Road, Madduramma Temple, Manasa Nagar Nagarabhavi 1st Stage, VTC: Bangalore North - 560072,
4) **Nandini B. C.,** D/o. Chowdeshwarappa, Aged about 28 years No.1035, 1st Main Road, Madduramma Temple, Manasa Nagar Nagarabhavi 1st Stage, VTC: Bangalore North – 560072. .....**Petitioners**
AND
NIL . ..**Respondent**

PUBLIC NOTICE

Notice is hereby given that a Petitioners filed a petition under Section 278 and Section 218 of Indian succession Act, declaring her as successor of deceased Late. Sri B.Y. Chowdeshwarappa @ B.Y. Chidambar Suresh, died on 01/05/2021 to succeed the Schedule Property and also all his assets and Issuance of Succession Certificate to succeed to the Schedule Property of Late. Sri B.Y. Chowdeshwarappa @ B.Y. Chidambar Suresh and other benefits.

Hence, the Petitioners hereby gave this notice to appear before the court on **09.09.2025 at 11.AM** either personally or through her counsel to answer to the Petition failing which, the case will be heard and decided ex-parte.

Given under my hand and the seal of the court this the 10th day of July 2025.

SCHEDULE PROPERTY

All that piece and parcel of site No.575, situated at 2nd Block, 3rd Cross, Banashankari 1st Stage, Bangalore, BBMP Ward No.55, East to west 30 feet and North to South 50 feet total measuring 1500 Sq.ft., along with 1000 Sq.Ft of RCC Building, constructed there on. The doors and windows made out of jungle wood and the walls are of bricks and cement. The flooring is red oxide, with all amenities like water, sanitary, electricity and bounded on the; East by: site No.574; West by: site No.576; North by : Road; South by: site No.592.

Advocate for Petitioners
M.G.C. & Co.,
No.66, 4th Cross,
Xavier Layout ,Bangalore – 560047

By order of the Court
Deputy Registrar
City Civil Court Mayahall (Unit),
Bangalore

ANAND RATHI — ಆನಂದ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್
ಎಕ್ಸ್‌ಪ್ರೆಸ್ ಝೋನ್, ಎ ವಿಂಗ್, 8ನೇ ಮಹಡಿ, ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ಗೋರೆಗಾಂವ್ (ಪೂ), ಮುಂಬೈ – 400 063, ಭಾರತ.
ಮೊಬೈಲ್ : +91 9820648283 | ವೆಬ್‌ಸೈಟ್ : www.rathi.com

ಇ-ಹರಾಜು ಮಾರಾಟ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕೆಳಗಿನ ಸಾಲಗಾರ / ಸಹ ಸಾಲಗಾರ / ಜಾಮೀನುದಾರರಿಗೆ ಸೂಚನೆ ನೀಡುವುದೇನೆಂದರೆ ಈ ಕೆಳಗೆ ವಿವರಿಸಿದ **ಷೆಡ್ಯೂಲ್ ಸ್ಥಿರಾಸ್ತಿಯನ್ನು ಆನಂದ್ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್ (ARGFL)** (ಭದ್ರತಾ ಸಾಲದಾತ) ಇವರ ಸಾಲದ ಖಾತೆ ಸಂ. APPL00004132 ಇದರ ರಚನಾತ್ಮಕ ಸ್ವಾಧೀನವನ್ನು ARGFLನ ಅಧಿಕೃತ ಅಧಿಕಾರಿಯು ಸ್ವಾಧೀನ ಪಡಿಸಿಕೊಂಡಿದ್ದಾರೆ. ಸ್ವಾಧೀನ ಪಡೆದ ಆಸ್ತಿಯನ್ನು ಆನ್‌ಲೈನ್ ಅ-ಹರಾಜಿನ ವೆಬ್‌ಸೈಟ್ : ಮೂಲಕ https://sarfaesi.auctiontiger.net ನಿರ್ದಿಷ್ಟವಾಗಿ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾದ ದಿನಾಂಕದಂದು, **"ಎಲ್ಲಿದೆಯೋ ಹಾಗೇ" "ಹೇಗಿದೆಯೋ ಹಾಗೇ"** & **"ಏನಿದೆಯೋ ಹಾಗೇ"** ಆಧಾರದ ಮೇಲೆ ಷೆಡ್ಯೂಲ್‌ನಲ್ಲಿ ನಿರ್ದಿಷ್ಟವಾಗಿ ನಮೂದಿಸಲಾದ ಒಟ್ಟು ಮೊತ್ತದ ವಸೂಲಾತಿ ಮತ್ತು ಅದರ ಮೇಲಿನ ಒಪ್ಪಂದದ ಬಡ್ಡಿ ಮತ್ತು ಇತರ ವೆಚ್ಚಗಳು ಮತ್ತು ಶುಲ್ಕಗಳು ಕೆಳಗೆ ತಿಳಿಸಿದಂತೆ ಸಾಲಗಾರ / ಸಹ–ಸಾಲಗಾರ / ರು / ಜಾಮೀನುದಾರರಿಂದ ಪಾವತಿಯಾಗುವವರೆಗೆ ದಿನಾಂಕದವರೆಗೆ ವಸೂಲಿಗಾಗಿ ಮಾರಾಟ ಮಾಡಲಾಗುವುದು.

ಸಾಲಗಾರರ ಹೆಸರು : (1) ಮೆ॥ ವಿ.ಎಸ್.ಆರ್. ಸೂಪರ್ ಸ್ಮಾರ್ಟ್ ಮಾರ್ಕೆಟ್, ಶಾಪ್ ನಂ. 1, ನಂ. 22, 7ನೇ ಮೇನ್, ಸುಬ್ಬಯ್ಯನಪಾಳ್ಯ, ಬಾಣಸವಾಡಿ, ಬೆಂಗಳೂರು – 560043.	
ಸಹ ಸಾಲಗಾರ/ರು ಹೆಸರು (2) ಶ್ರೀ ವಿಜಯಸಾಗರ ಜಿ, ನಂ. 002, ಆದಿತ್ಯ ಸನ್‌ಶೈನ್ ಅಪಾರ್ಟ್‌ಮೆಂಟ್, 2ನೇ ಕ್ರಾಸ್, ರಾಮಯ್ಯ ರೆಡ್ಡಿ ಲೇಔಟ್, ಓ.ಎಂ.ಬಿ.ಆರ್. ಲೇಔಟ್, ಚಿಕ್ಕಬಾಣಸವಾಡಿ, ಬೆಂಗಳೂರು – 560043. (3) **ಶ್ರೀಮತಿ ರಾಜಕುಮಾರಿ,** ನಂ. 002, ಆದಿತ್ಯ ಸನ್‌ಶೈನ್ ಅಪಾರ್ಟ್‌ಮೆಂಟ್, 2ನೇ ಕ್ರಾಸ್, ರಾಮಯ್ಯ ರೆಡ್ಡಿ ಲೇಔಟ್, ಓಎಂಬಿಆರ್ ಲೇಔಟ್, ಚಿಕ್ಕಬಾಣಸವಾಡಿ, ಬೆಂಗಳೂರು – 560043.	
ಸ್ಥಿರಾಸ್ತಿಯ ವಿಳಾಸ : ನಂ. 1814/1765/1, ಪಿ.ಐ.ಡಿ. ನಂ. 88–123–23, 4ನೇ ಕ್ರಾಸ್, ಅಬ್ಬಯ್ಯ ರೆಡ್ಡಿ ಕಾಂಪೌಂಡ್, ಓ.ಎಂ.ಬಿ.ಆರ್. ಲೇಔಟ್, ವಿನ್ಸೆಂಟ್ ಪಲ್ಲೂಟಿ ಚರ್ಚ್ ಹತ್ತಿರ, ದೊಡ್ಡ ಬಾಣಸವಾಡಿ ಗ್ರಾಮ, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು – 560043. **ಚಕ್ಕುಬಂದಿ :- ಪೂರ್ವಕ್ಕೆ :** ರಸ್ತೆ, **ಪಶ್ಚಿಮಕ್ಕೆ :** ಖಾಸಗಿ ಆಸ್ತಿ, **ಉತ್ತರಕ್ಕೆ :** ಶ್ರೀ ಹೆ.ಎಸ್. ಹರೀಶ್ ಬಾಬು ಅವರಿಗೆ ಸೇರಿದ ಆಸ್ತಿ ಮತ್ತು **ದಕ್ಷಿಣಕ್ಕೆ :** ನಂಜಮ್ಮ ಅವರಿಗೆ ಸೇರಿದ ಆಸ್ತಿ.	
ಬಾಕಿ ಮೊತ್ತ (ತಗಾದೆ ಸೂಚನೆಯ ಪ್ರಕಾರ ಭವಿಷ್ಯದ ಬಡ್ಡಿ ಮತ್ತು ವೆಚ್ಚದೊಂದಿಗೆ)	ರೂ. 95,63,221/- (ರೂಪಾಯಿ ತೊಂಭತ್ತೈದು ಲಕ್ಷ ಅರವತ್ತೂರು ಸಾವಿರ ಎರಡು ನೂರ ಇಪ್ಪತ್ತೊಂದು ಮಾತ್ರ)
ಮೀಸಲು ಬೆಲೆ	ರೂ. 2,36,74,950/- (ರೂಪಾಯಿ ಎರಡು ಕೋಟಿ ಮೂವತ್ತಾರು ಲಕ್ಷ ಎಪ್ಪತ್ನಾಲ್ಕು ಸಾವಿರ ಒಂಭೈನೂರ ಐವತ್ತು ಮಾತ್ರ)
ಹರಾಜಿನ ದಿನಾಂಕ	15ನೇ ಸೆಪ್ಟಂಬರ್, 2025
ಮುಂಗಡ ಠೇವಣಿ ಹಣ	ಮೀಸಲು ಬೆಲೆಯ ಶೇ. 10% ರಷ್ಟು
ಕನಿಷ್ಠ ಬಿಡ್ ಹೆಚ್ಚಳ ಮೊತ್ತ	ರೂ. 25,000/-
ಉದ್ದೇಶಿತ ಖರೀದಿದಾರರಿಗೆ ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	8ನೇ ಸೆಪ್ಟಂಬರ್, 2025 ಬೆಳಗ್ಗೆ 10.00 ರಿಂದ ಸಂಜೆ 4.00 ರವರೆಗೆ
ಕೆವೈಸಿ. ದಾಖಲೆಗಳು / ಇ.ಎಂ.ಡಿ.ಯ ಪುರಾವೆ ಇತ್ಯಾದಿಗಳೊಂದಿಗೆ ಟೆಂಡರ್ ಫಾರಂ ಅನ್ನು ಸಲ್ಲಿಸಲು ದಿನಾಂಕ ಮತ್ತು ಸಮಯ	12ನೇ ಸೆಪ್ಟಂಬರ್, 2025 ಸಂಜೆ 4.00 ರವರೆಗೆ ಕೆ.ವೈ.ಸಿ. ದಾಖಲೆಗಳೊಂದಿಗೆ
ಆನ್‌ಲೈನ್ ಆಫರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	15ನೇ ಸೆಪ್ಟಂಬರ್, 2025, ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರ ನಡುವೆ
ಗಮನಿಸಿ : ಹರಾಜು ಪ್ರಕ್ರಿಯೆಗಳ ಬಗ್ಗೆ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ಉದ್ದೇಶಿಸಿರುವ ಬಿಡ್ಡುದಾರರು / ಖರೀದಿದಾರರು ಆನಂದ್ ರಾಠಿ ಗ್ರೂಪ್ ವೆಬ್‌ಸೈಟ್ : www.rathi.com ಗೆ ಭೇಟಿ ನೀಡಬಹುದು.	

ಈ ಪ್ರಕಟಣೆಯು ಮೇಲಿನ ಸಾಲಗಾರರು / ಸಹ ಸಾಲಗಾರರು / ಜಾಮೀನುದಾರರು ಅವರಿಗೆ ನಿಯಮ 9(1) ಅಥವಾ ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ಅಡಿಯಲ್ಲಿ 30 ದಿನಗಳ ನೀಡಿರುವ ಸೂಚನೆಯಾಗಿದೆ.

ದಿನಾಂಕ : 13ನೇ ಆಗಸ್ಟ್, 2025 — ಸಹಿ/- ಆನಂದ್ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್
ಸ್ಥಳ : ಬೆಂಗಳೂರು — ಅಧಿಕೃತ ಅಧಿಕಾರಿ

IN THE COURT OF THE CIVIL JUDGE AND JMFC AT KR PURAM
O.S. No. 1145 /2025

Between: Sri. D.N. **ASHWATHANARAYANA,** aged about 67 years, S/o. Mr. Narayanappa, R/at No. 167, 7th Cross, Nanjappa Garden, Babusab Palya, Horamavu Post, Bangalore- 560 043 ...**PLAINTIFF**
And: Smt. CHANDRAKALA ...DEFENDANT

SUMMONS TO DEFENDANT

Smt. CHANDRAKALA, aged about 44 years, W/o. Mr. Murugan .S, R/at No. 158, 4th A Cross, 1st G Main, Kasturinagar, Bangalore-560 043

Whereas, the Plaintiff above named has filed the above suit against defendants for the relief of permanent injunction in respect of the suit schedule property. Take notice that you are hereby summoned to appear before the Hon'ble Civil Judge and JMFC at K.R.Puram on **27/09/2025** at **11.00 AM.** either in person or through a counsel/ Pleader, failing which the matter will be heard exparte.

SCHEDULE

All that piece and parcel of the property bearing Site Nos.27 and 28, Assessment No.1/1, BBMP Khatha No.293/3, Ward No.25, situated at Amani Byrathi Khane Village, K.R. Puram Hobli, Bangalore East Taluk, Bangalore, now this property comes under the BBMP Limits, measuring East to West 60 Feet and North to South 35 feet, and total area 2100 sq.feet along with 2 squares of RCC Roofed House, red oxide flooring with all other civic amenities and bounded on: **East by:** Site No.26, **West by:** Site No.29, **North by:** Site Nos.21 and 22, **South by:** 25 Feet Road

Given under my hand and seal of this Court on this 13/08/2025.

By order of the Court, Sheristedar, Civil Judge & JMFC, Krishnarajapuram

Advocate for Plaintiff:
Sri. M. NARAYANASWAMY
No.173/1, Opposite HR Sports, Foundation School Road
Halasahalli, Varthur, Bengaluru- 560 087

ಮೈಸೂರು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್
ಸಿಐಎನ್: L24221KA1969PLC001799
ನೋಂದಣಿ ಕಚೇರಿ: ಡಿ-4, ಜ್ಯೋತಿ ಕಾಂಪ್ಲೆಕ್ಸ್, 134/1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು - 560 001. **ದೂರವಾಣಿ:** 080-22868372
ಇಮೇಲ್: mpcl@mysorepetro.com; **ವೆಬ್‌ಸೈಟ್:** www.mysorepetro.com

ಜೂನ್ 30, 2025ಕ್ಕೆ ಕೊನೆಗೊಂಡ ತ್ರೈಮಾಸಿಕದ ಸ್ವತಂತ್ರ ಮತ್ತು ಕ್ರೋಢೀಕೃತ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ಹೇಳಿಕೆ

ಕಂಪನಿಯ ನಿರ್ದೇಶಕರ ಮಂಡಳಿಯು ಇಂದು ನಡೆದ ತಮ್ಮ ಸಭೆಯಲ್ಲಿ, ಜೂನ್ 30, 2025ಕ್ಕೆ ಕೊನೆಗೊಂಡ ತ್ರೈಮಾಸಿಕದ ಕಂಪನಿಯ ಸ್ವತಂತ್ರ ಮತ್ತು ಕ್ರೋಢೀಕೃತ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಸೀಮಿತ ವಿಮರ್ಶೆ ವರದಿಯೊಂದಿಗೆ ಕಂಪನಿಯ ಹಣಕಾಸು ಫಲಿತಾಂಶಗಳು ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ http://www.mysorepetro.com/quarterly-financial-results-1/ ನಲ್ಲಿ ಲಭ್ಯವಿದೆ, ಇದನ್ನು ಕ್ವಿಕ್ ರೆಸ್ಪಾನ್ಸ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು.

ಸ್ಥಳ: ಮುಂಬೈ
ದಿನಾಂಕ: ಆಗಸ್ಟ್ 13, 2025

ಬೋರ್ಡ್ ಆದೇಶದ ಮೇರೆಗೆ
ಮೈಸೂರು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್
ಡಾ. ವೈಜಯಂತಿ ಪಂಡಿತ್
ಅಧ್ಯಕ್ಷರು
DIN 06742237

IN THE COURT OF THE MOTOR ACCIDENT CLAIMS TRIBUNAL AT BANGALORE (SCCH-08)
M.V.C. No. 2608/2025
BETWEEN : VIKAS.C.S.GOWDA ...PETITIONER
AND : SHASHI KUMAR .S.Y & ANOTHER ...**RESPONDENTS**

NOTICE TO RESPONDENT No. 1

SHASHI KUMAR .S.V, C/o. Yellappa, # Jog Bidi DinnePalya, near Shanimahathma Temple, Gottigere, Bangalore South, Bangalore - 560083. (RC Owner of Car Reg. No : KA-51-AH-2140)

Whereas, the above Claim Petition is filed by the Petitioner against you and "NEW INDIA ASSURANCE COMPANY LIMITED' for seeking compensation for a sum of Rs.5,00,000/- on account of the injuries sustained by Petitioner in the Road Traffic Accident that occurred on 22.02.2025 at about 07:20 P.M, while the Petitioner was carefully travelling as Pillion rider on Motor Cycle bearing Reg. No. KA-05-QF-6213, by following all traffic rules and regulations, also by wearing helmet, near Orchids International School, C K Palya Main Road, Hommadevanahalli, Bangalore, at that time Driver of the Car bearing Registration No. KA-51-AH-2140, came at high speed in rash and negligent manner so as to endanger to the public and dashed against the Petitioner's Motor cycle and caused the accident. You are hereby Summoned to appear in this Court in person or pleader duly instructed **on 22.09.2025 at 11.00 A.M.** To answer the Claim Petition.

Take notice that in default of your appearance on the said date, the same will be heard and determined in your absence.

Given under my hand and seal of the Court 02.08.2025.

By Order of the Court, Assistant Registrar, Court of Small Causes, Bengaluru.

ADVOCATE FOR PETITIONER :
VINODA B C, ADVOCATE
No. 5/9, 50 Feet Road, Muneshwara Block, Girinagar, Bangalore-560058.

CMYK